ಓಎಸ್. ನಂ.66/2023

ಪಿ.ಡಬ್ಲ್ಯೂ: 1

**ದಿನಾಂಕಃ 07-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಡಿ.ಟಿ.ಬಿ ವಕೀಲರಿಂದಃ**

ನನ್ನ ತಂದೆಗೆ 3 ಜನ ಮಕ್ಕಳು ಇರುತ್ತಾರೆ. 1 ನೇ ಪ್ರತಿವಾದಿ ದೊಡ್ಡ ಮಗ ಇರುತ್ತಾರೆ. ಎಲ್ಲ 3 ಜನ ಹೆಣ್ಣು ಮಕ್ಕಳ ಮದುವೆ ಆಗಿರುತ್ತದೆ. ನನ್ನ ಅಕ್ಕನ ಮದುವೆ ಆದ ನಂತರ ನನ್ನ ತಂದೆ ಜೀವಂತ ಇದ್ದನು. ನನ್ನ ತಂದೆ ತೀರಿಕೊಂಡು 12 ವರ್ಷಗಳು ಆಗಿರುತ್ತವೆ. ನನ್ನ ಮದುವೆ ನಾನು 20 ವರ್ಷಗಳು ಇದ್ದಾಗ ಆಗಿದೆ. ಈಗ ನನಗೆ 50 ವರ್ಷ ಇರುತ್ತದೆ ಎಂದರೆ ಸರಿ. ಮದುವೆಯಾದ ನಂತರ ನಾನು, ನನ್ನ ಅಕ್ಕ ನಮ್ಮ ನಮ್ಮ ಗಂಡಂದಿರ ಮನೆಯಲ್ಲಿ ಇದ್ದೆವು. ನಾವು ಗಂಡನ ಮನೆಯಲ್ಲಿ ಹೋದ ನಂತರ ನನ್ನ ತಾಯಿ ನನ್ನ ಅಣ್ಣನೊಂದಿಗೆ ಇದ್ದಳು ಎಂದರೆ ಸರಿ.

**02.** ನಮ್ಮ ಕುಟುಂಬಕ್ಕೆ 03 ಜಮೀನುಗಳು ಇರುತ್ತವೆ. ಸದರಿ ಜಮೀನುಗಳ ಸರ್ವೆ ನಂಬರ ಹೆಸರು ಹೇಳಲು ಬರುವುದಿಲ್ಲ. ನಮ್ಮ ಕುಟುಂಬಕ್ಕೆ ಒಟ್ಟು 5 ಜಮೀನುಗಳು ಅಂದರೆ ಸರಿ. ಸರ್ವೆ ನಂ.48 ಕ್ಷೇತ್ರ 12 ಎಕರೆ, ಸರ್ವೆ ನಂ.43 ಕ್ಷೇತ್ರ 12 ಎಕರೆ 27 ಗುಂಟೆ ಈ ಎರಡು ಜಮೀನುಗಳು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸಾಕ್ಷಿ ಮುಂದುಹೊರದು 3 ಜಮೀನುಗಳಿಗೆ ಸೇರಿ ದಾವೆ ಮಾಡಿರುತ್ತೇನೆ. ಸುಮಾರು 25 ವರ್ಷಗಳ ಹಿಂದೆ ನನ್ನ ತಂದೆ ನಮ್ಮ ಮದುವೆಯಲ್ಲಿ ತಲಾ 10 ತೊಲೆ ಬಂಗಾರ ಮತ್ತು ರೂ.5 ಲಕ್ಷ ಹಣ ನೀಡಿರುತ್ತಾನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಮ್ಮ ಗಂಡನ ಮನೆಯಲ್ಲಿ ವಾಸವಿದ್ದು, ಈಗ ಬೇರೆಯವರ ಮಾತು ಕೇಳಿ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ಈಗಾಗಲೇ ಭಾಗವನ್ನು ಕೊಟ್ಟಿದ್ದರೂ ಸಹಿತ ನಾವು ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಇನ್ನೂ ಎರಡು ಜಮೀಲನುಗಳನ್ನು ಈ ದಾವೆಯಲ್ಲಿ ಯಾಕೆ ಸೇರಿಸಿಲ್ಲ ಎನ್ನುವ ಬಗ್ಗೆ ವಿವರಣೆ ನೀಡಿರುವುದಿಲ್ಲ

ಎಂದರೆ ಸಾಕ್ಷಿಯು ಮೂರು ಹೊಲಗಳಿಗೆ ಸಂಬಂಧಿಸಿದಂತೆ ಮಾತ್ರ ದಾವೆ ಮಾಡಿರುತ್ತೇವೆ ಎಂದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಗಳು ನಮ್ಮ ಅಣ್ಣನಿಗೆ ಅಜ್ಜ, ಮುತ್ತಜ್ಜರಿಂದ ಬಂದಿರುತ್ತವೆ. ಸದರಿ ಜಮೀನುಗಳು 1991 ರಲ್ಲಿ ಅಂದರೆ ನಮಗೆ ಮದುವೆ ಮಾಡಿಕೊಡುವ ಸಮಯದಲ್ಲಿ ನಮ್ಮ ಅಣ್ಣನ ಹೆಸರಿನಲ್ಲಿ ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. 1991 ರಲ್ಲಿ ಭಾಗವನ್ನು ತೆಗೆದುಕೊಂಡಿದ್ದರೂ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.